ಗರಿಷ್ಠ ರೂ. 10 ಲಕ್ಷವರೆಗೆ ಸಹಾಯದನ, ವಲಯ 2ರಲ್ಲಿ ಪ್ರಾರಂಭಿಸುವ ಕೈಗಾರಿಕೆಗಳಿಗೆ ಮದ್ರಾಂಕ ಶುಲ್ಕ ಪಾವತಿಯಲ್ಲಿ ವಿನಾಯಿತಿ ಭೂ ಪರಿವರ್ತನೆ ಶುಲ್ಕದಲ್ಲಿ ವಿನಾಯಿತಿ, ಆಧುನೀಕರಣ, ವಿಸ್ತರಣೆ ಹಾಗೂ ಕೈಗಾರಿಕೆಗಳ ಬೆಳವಣಿಗೆಗೆ ಪ್ರತ್ಯೇಕ ರಿಯಾಯಿತಿಗಳನ್ನು ನೀಡಲಾಗುವುದು. IS0-9000 ಪ್ರಮಾಣಪತ್ರ ಪಡೆದ ಘಟಕಗಳಿಗೆ ರೂ.75,000/-ಗಳ ಗರಿಷ್ಠ ಸಹಾಯಧನವನ್ನು ನೀಡಲಾಗುವುದು. ISI ಪಡೆದ ಘಟಕಗಳಿಗೆ ರೂ. 30,000/-ಗಳಷ್ಟು ವೆಚ್ಚವನ್ನು ನೀಡಲಾಗುತ್ತಿದೆ.

ಆ) ಸಣ್ಣ ಕೈಗಾರಿಕೆಗಳಾದ ಜನರಲ್ ಇಂಜಿನಿಯರಿಂಗ್, ವೆಲ್ಡಿಂಗ್ ವರ್ಕ್ಸ್, ವಲ್ಕನೈಸಿಂಗ್ ಮತ್ತು ಪ್ಯಾಬ್ರಿಕೇಶನ್ ಘಟಕಗಳು ಹಾಗೂ ಮತ್ತಿತ್ತರ ಕೈಗಾರಿಕೆಗಳು ಬರಬಹುದಾಗಿದೆ. ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳ ಸ್ಥಾಪನೆಗಾಗಿ ಜನರಲ್ಲಿ ಜಾಗೃತ್ತಿ ಮೂಡಿಸಲು ಉದ್ಯಾಮಶೀಲತಾ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸದ್ಯಕ್ಕೆ ಹುಲುಸೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ ಕೈಗಾರಿಕಾ ಪ್ರದೇಶ/ವಸಾಹತುಗಳನ್ನು ಸ್ಥಾಪಿಸಿರುವುದಿಲ್ಲ ಮತ್ತು ಕೈಗಾರಿಕಾ ಶೆಡ್ಡುಗಳನ್ನು ನಿರ್ಮಿಸಿರುವುದಿಲ್ಲ. ಆದರೆ, ಕುಶಲಕರ್ಮಿಗಳ ಅನುಕೂಲಕಾ ಎರಡು ವಿಶ್ವ ಸಾಮೂಹಿಕ ಕಾರ್ಯಗಾರಗಳನ್ನು ನಿರ್ಮಿಸಲಾಗಿದೆ. ಕಳೆದ ಒಂದು ವರ್ಷದಿಂದ ಈ ಬಗ್ಗೆ ಯಾವುದೇ ವೆಚ್ಚವನ್ನು ಮಾಡಿರುವುದಿಲ್ಲ.

ಇ) ಹುಲುಸೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ ಕೈಗಾರಿಕಾ ಘಟಕಗಳಿಂದ ಕೈಗಾರಿಕಾ ವಸಾಹತು ಅಥವಾ ಕೈಗಾರಿಕಾ ಪ್ರದೇಶಗಳನ್ನು ಸದ್ಯಕ್ಕೆ ಸ್ಥಾಪಿಸಿರುವುದಿಲ್ಲ. ಬೇಡಿಕೆ ಬಂದಲ್ಲಿ ಕ್ರಮ ಕೈಗೊಳ್ಳಲಾಗುವುದು. ಆದರೂ ಈ ಕ್ಷೇತ್ರದಲ್ಲಿ ಸ್ಥಾಪಿತವಾಗುವುದು ಕೈಗಾರಿಕೆಗಳಿಗೆ ಉತ್ತೇಜನ ಮತ್ತು ರಿಯಾಯಿತಿಗಳನ್ನು ನೀಡಲಾಗುತ್ತಿದೆ.

ಈ) ಮೇಲೆ ತಿಳಿಸಿರುವಂತೆ ರಾಜ್ಯ ಸರ್ಕಾರದ ಕೈಗಾರಿಕಾ ನೀತಿ 1996-2001 ರಂತೆ ಸದರೀ ಮತಕ್ಷೇತ್ರವನ್ನೊಳಗೊಂಡಂತೆ, ಇಡೀ ಬೀದರ್ ಜಿಲ್ಲೆಯನ್ನು ಅಭಿವೃದ್ಧಿಹೊಂದುತ್ತಿರುವ ಪ್ರದೇಶವೆಂದು ವರ್ಗೀಕರಿಸಲಾಗಿದೆ.

ಈ ಕ್ಷೇತ್ರದಲ್ಲಿ ಸ್ಥಾಪಿಸುವ ಉದ್ದಿಮೆಗಳಿಗೆ ರಾಜ್ಯ ಸರ್ಕಾರದ ಕೈಗಾರಿಕಾ ನೀತಿ 1996-2001 ರನ್ವಯ ಉತ್ತೇಜನ ಮತ್ತು ರಿಯಾಯಿತಿಗಳು ಲಭ್ಯವಿದೆ. ಅಂದರೆ ಸ್ಥಿರಾಸ್ತಿಯಲ್ಲಿ ತೊಡಗಿಸಿದ ಬಂಡವಾಳದ ಮೇಲೆ ಶೇ. 25ರಂತೆ ಗರಿಷ್ಠ ರೂ.10 ಲಕ್ಷವರೆಗೆ ಸಹಾಯಧನ, ವಲಯ 2ರಲ್ಲಿ ಪ್ರಾರಂಭಿಸುವ ಕೈಗಾರಿಕೆಗಳಿಗೆ ಮುದ್ರಾಂಕ ಶುಲ್ಕ ಪಾವತಿಯಲ್ಲಿ ವಿನಾಯಿತಿ, ಭೂ ಪರಿವರ್ತನೆ ಶುಲ್ಕದಲ್ಲಿ ವಿನಾಯಿತಿ, ಆಧುನೀಕರಣ, ವಿಸ್ತರಣೆ ಹಾಗೂ ಕೈಗಾರಿಕೆಗಳ ಬೆಳವಣಿಗೆಗೆ ಪ್ರತ್ಯೇಕ ರಿಯಾಯಿತಿಗಳನ್ನು ನೀಡಲಾಗುವುದು.

ನಗರ ಸಭೆ ವ್ಯಾಪ್ತಿಯಲ್ಲಿನ ನಿವೇಶನಗಳು

4788 - ಶ್ರೀ ಶಿವಣ್ಣ ಎಸ್. (ತುಮಕೂರು) : ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತುಮಕೂರು ನಗರ ಸಭೆ ವ್ಯಾಪ್ತಿಯಲ್ಲಿ ಐ.ಡಿ.ಎಸ್.ಎಂ.ಟಿ ಯೋಜನೆಯಲ್ಲಿ ನಿರ್ಮಿಸಿದ

ನಿವೇಶನಗಳಿಷ್ಟು. (ಇದಕ್ಕಾಗಿ ಭೂ ಸ್ವಾಧೀನ ಪಡಿಸಿಕೊಂಡ ಜಮೀನಿನ ವಿವರ ಸರ್ವೆ ನಂ.ವಾರು ವಿಸ್ತೀರ್ಣವಾರು ವಿವರ ನೀಡುವುದು).

ಆ) ಗುತ್ತಿಗೆ ಅವಧಿಯಲ್ಲಿ ನಿವೇಶನ ಪರಭಾರೆ ಮಾಡಿಕೊಳ್ಳಲು ಅನುಮತಿ ನೀಡಿರುವ ಪ್ರಕರಣಗಳ ಸಂಖ್ಯೆ ಎಷ್ಟು ? ಅನುಮತಿಸದ ಪರಭಾರೆ ಸರ್ಕಾರದ ಗಮನಕ್ಕೆ ಬಂದಿದೆಯೇ ? ಈ ಬಗ್ಗೆ ಸರ್ಕಾರದ ಕ್ರಮಗಳೇನು ?

ಇ) ನೀರು ಸರಬರಾಜು ವಿದ್ಯುತ್ ಸರಬರಾಜು ಹಾಗೂ ಇತರ ಮೂಲಭೂತ ಸೌಕರ್ಯ ಕಲ್ಪಿಸಲಾಗಿದೆಯೇ ?

ಈ) ನಿವೇಶನ ಕೋರಿ ಸಲ್ಲಿಸಿದ್ದ ಸಾರ್ವಜನಿಕರ ಠೇವಣಿ ಹಣವೆಷ್ಟು ? ವಾಪಸ್ ಮಾಡಿರುವುದು ಎಷ್ಟು ವಾಪಸ್ಸು ನೀಡದಿರುವ ಮೊತ್ತವೆಷ್ಟು ? ವಾಪಸ್ ನೀಡಿರುವುದಕ್ಕೆ ಕಾರಣಗಳೇನು ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಪೌರಾಡಳಿತ ಸಚಿವರು) :

ಆ) ತುಮಕೂರು ನಗರದ ಅರಳೀಮರದ ಪಾಳ್ಯ ಬಡಾವಣೆಯಲ್ಲಿ ಐ.ಡಿ.ಎಸ್.ಎಂ.ಟಿ ಯೋಜನೆಯಡಿಯಲ್ಲಿ 1092 ನಿವೇಶನಗಳನ್ನು ವಿಂಗಡಿಸಲಾಗಿದೆ. ಈ ಯೋಜನೆಯಡಿ ಭೂಸ್ವಾಧೀನಪಡಿಸಿದ ಜಮೀನಿನ ಸರ್ವೆ ನಂಬರುಗಳ ವಿವರ ಈ ಕೆಳಕಂಡಂತೆ ಇದೆ.

Sl. No.	Survey No.	Extent	Sl. No.	Survey No.	Extent
1.	174/1	1.38	20.	197/1	1.03
2.	174/3	1.20	21.	197/2	9.28
3.	175/1A	2.31 ½	22.	198/2	3.38
4.	175/2	2.36	23.	198/3	3.06
5.	176	1.19	24.	198/4	5.22
6.	177/2A	3.00	25.	199/2	5.32
7.	177/2B	1.23	26.	199/1A	0.35
8.	174/4A	0.28	27.	199/1B	0.03
9.	177/6	6.03	28.	177/A	2.26
10.	178	5.02	29.	196/2A	1.20
11.	179/1	2.30	30.	196/2B	1.15
12.	179/2	2.38	31.	177/3	2.37
13.	179/3	2.04	32.	177/5	1.38

Sl. No.	Survey No.	Extent	Sl. No.	Survey No.	Extent
14.	179/4	3.29	33.	179/5	0.31
15.	180	2.29	34.	179/6	0.15
16.	196/1	2.28	35.	185	1.00
17.	196/3	1.26	36.	186/2A	2.20
18.	196/4	1.34	37.	187	2.23
19.	195/5	1.17			

ಆ) ಐ.ಡಿ.ಎಸ್ ಎಂ.ಟಿ ಯೋಜನೆಯಡಿ ವಿಂಗಡಿಸಲಾದ ನಿವೇಶನಗಳನ್ನು ಹಂಚಿಕೆದಾರರಿಗೆ ಹಂಚಿಕೆಯಾದ ನಂತರ ಭೂ ಮಾಲೀಕರಿಂದ ಸ್ವಾಧೀನ ಮಾಡಿಕೊಂಡಿರುವ ಜಮೀನಿನ ಸರ್ವೆ ನಂಬರ್‌ಗಳ ಭೂ ಮಾಲೀಕರಿಗೆ ಮುಫತ್ತಾಗಿ ನೀಡಿರುವ ನಿವೇಶನಗಳನ್ನು ಮಾರಾಟ ಮಾಡಿಕೊಳ್ಳಲು ದಿನಾಂಕ 15.8.1992 ಐ.ಡಿ.ಎಸ್ ಎಂ.ಟಿ ಸಭೆಯ ನಡವಳಿಕೆಯಂತೆ ಹಾಗೂ ಇತರೇಯವರಿಗೆ ಒಟ್ಟು 86 ನಿವೇಶನಗಳನ್ನು ಮಾರಾಟ ಮಾಡಿಕೊಳ್ಳಲು ಪೌರಾಯುಕ್ತರಿಂದ ಅನುಮತಿ ನೀಡಲಾಗಿರುತ್ತದೆ.

ಇ) ಈ ವಸತಿ ಬಡಾವಣೆಗೆ ನೀರು ಸರಬರಾಜು ವ್ಯವಸ್ಥೆ ಕಲ್ಪಿಸಲಾಗಿದೆ. ವಿದ್ಯುತ್ ಸರಬರಾಜು ಕಾಮಗಾರಿ ಕೆಲಸವು ಪೂರ್ಣಗೊಂಡಿದ್ದು ವಿದ್ಯುತ್ ಸಂಪರ್ಕ ನೀಡಬೇಕಾಗಿದೆ.

ಈ) ನಿವೇಶನಕೋರಿ ಬಂದ ಅರ್ಜಿದಾರರಿಂದ ಒಟ್ಟು45,98,128 ರೂ.ಗಳನ್ನು ಠೇವಣಿಯಾಗಿ ಪಡೆದಿದ್ದು ಈ ಮೊಬಲಗಿನಲ್ಲಿ33,67,463 ರೂ.ಗಳನ್ನು ಹಿಂದಿರುಗಿಸಲಾಗಿರುತ್ತದೆ. ರೂ. 12,30,735 ರೂ.ಗಳನ್ನು ವಾಪಸ್ ನೀಡಲು ಬಾಕಿ ಇದ್ದ ಈ ಬಗ್ಗೆ ಈಗಾಗಲೇ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ನಿವೃತ್ತ ನೌಕರರಿಗೆ ೫ನೇ ವೇತನ ಆಯೋಗದ ಶಿಫಾರಸ್ಸನ್ನು ಜಾರಿಗೊಳಿಸುವುದು

4789 - ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಮಹಾನಗರ ಪಾಲಿಕೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ನೌಕರರಿಗೆ 5ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಜಾರಿಗೊಳಿಸಲಾಗಿದೆಯೆ?

ಆ) ಹಾಗಿಲ್ಲದಿದ್ದಲ್ಲಿ ಕಾರಣಗಳೇನು?

ಇ) ಇವರುಗಳಿಗೂ 5ನೇ ವೇತನ ಆಯೋಗದ ಶಿಫಾರಸ್ಸನ್ನು ಜಾರಿಗೊಳಿಸುವ ಬಗ್ಗೆ ಸರ್ಕಾರದ ನಿಲುವೇನು?

ಈ) ಹಾಗಿದ್ದಲ್ಲಿ ಎಂದು ಜಾರಿಗೊಳಿಸಲಾಗುವುದು?